
ವಿಜ್ಞಾನ ಹಾಗೂ ಕಲಾ ಕ್ಷೇತ್ರಕ್ಕೆ ಮಹಿಳೆಯರಿಗೆ ಪ್ರವೇಶವಿಲ್ಲದ ಕಾಲದಲ್ಲಿ ಜೀವರಾಶಿಯ ಅಧ್ಯಯನ ಕೈಗೊಂಡು, ತಮ್ಮ ಹೊಳಹುಗಳನ್ನು ಚಿತ್ರಕಲೆಯ ಮೂಲಕ ದಾಖಲಿಸಿದವರು ಮರಿಯಾ ಸಿಬಿಲ್ಲಾ ಮೆರಿಯನ್. ವಿಶ್ವದ ಶ್ರೇಷ್ಠ ಮಹಿಳಾ ವಿಜ್ಞಾನಿಗಳಲ್ಲಿ ಒಬ್ಬರಾದ 17ನೇ ಶತಮಾನದ ಮೆರಿಯನ್‌ರ ಅಸಾಧಾರಣ ಬದುಕು ಮತ್ತು ಸಾಧನೆ ಈಗಲೂ ಅಷ್ಟೇನೂ ಜನಪ್ರಿಯವಲ್ಲ.

■ ಜೆ. ಬಾಲಕೃಷ್ಣ




ಮೆರಿಯನ್ನಳ ಮಲತಂದೆ ಜಾಕೊಬ್ ಮ್ಯಾರೆಲ್ 1679ರಲ್ಲಿ ರಚಿಸಿದ ಮರಿಯಾ ಸಿಬಿಲ್ಲಾ ಮೆರಿಯನ್‌ಳ ಭಾವಚಿತ್ರ

# ವಿಜ್ಞಾನವನ್ನು ಚೆಂದಗೊಳಿಸಿದ ಮಹಿಳೆ ಮರಿಯಾ ಸಿಬಿಲ್ಲಾ ಮೆರಿಯನ್



1699ರಲ್ಲಿ 52 ವರ್ಷದ ಒಬ್ಬ ಮಹಿಳೆ ತನ್ನ ಮಗಳೊಂದಿಗೆ 5000 ಮೈಲಿ ದೂರದ ದಕ್ಷಿಣ ಅಮೆರಿಕದ ಸುರಿನಾಮೆಗೆ ನೆದರ್ಲೆಂಡ್‌ನಿಂದ ಹಡಗಿನಲ್ಲಿ ಪ್ರಯಾಣ ಆರಂಭಿಸಿದಳು. ಆಕೆಯ ಹೆಸರು ಮರಿಯಾ ಸಿಬಿಲ್ಲಾ ಮೆರಿಯನ್. ಆಕೆಯ ಉದ್ದೇಶ, ದಕ್ಷಿಣ ಅಮೆರಿಕದ ಕಾಡುಗಳಲ್ಲಿನ ಸಸ್ಯ ಹಾಗೂ ಕೀಟಗಳ ಅಧ್ಯಯನ ಮತ್ತು ಅವುಗಳನ್ನು ಚಿತ್ರಿಸಿ ದಾಖಲಿಸುವುದಾಗಿತ್ತು.

ಆ ಕಾಲದ ಯೂರೋಪಿನಲ್ಲಿ ಹೆಣ್ಣಿಗೆ ವಿಜ್ಞಾನ ಅಥವಾ ಕಲಾಕ್ಷೇತ್ರಕ್ಕೆ ಪ್ರವೇಶಿಸಲು ಸಮಾಜ ಸಮ್ಮತಿಸುತ್ತಿರಲಿಲ್ಲ. ಚಿತ್ರಕಲಾವಿದೆಯಾದ ಆಕೆಗೆ ಪ್ರಕೃತಿ ಹಾಗೂ ಜೀವರಾಶಿಯ, ಅದರಲ್ಲೂ ಸಸ್ಯ ಮತ್ತು ಕೀಟಗಳ ಕುರಿತು ಅತೀವ ಆಸಕ್ತಿ ಇದ್ದುದರಿಂದ ಆಕೆ ಅಷ್ಟು ಹೊತ್ತಿಗೆ ಅವುಗಳ ವಿವಿಧ ಹಂತಗಳನ್ನು ವರ್ಣರಂಜಿತವಾಗಿ, ಅದ್ಭುತವಾಗಿ ಚಿತ್ರಿಸಿ ಪ್ರಕಟಿಸಿದ್ದಳು. ಸುರಿನಾಮೆಯಲ್ಲಿ ಎರಡು ವರ್ಷ ಸತತ ಅಧ್ಯಯನ ಮಾಡಿ ಅವುಗಳ ಚಿತ್ರಗಳನ್ನು ಬಿಡಿಸಿದಳು. ಆದರೆ ಅಲ್ಲಿನ ಕಾಡುಮೇಡು ಅಲೆದಾಟದಲ್ಲಿ ಮಲೇರಿಯಾಗೆ ತುತ್ತಾದ ಆಕೆ ಆಮ್‌ಸ್ಟರ್‌ಡ್ಯಾಂಗೆ ಹಿಂದಿರುಗಬೇಕಾಯಿತು. ನಂತರ ಮೆರಿಯನ್ ತನ್ನ ಅಧ್ಯಯನದ ನೂರಾರು ಚಿತ್ರಗಳನ್ನು 'ಮೆಟಮಾರ್ಫೋಸಿಸ್ ಇನ್‌ಸೆಕ್ಟೋರಮ್ ಸುರಿನಾಮೆನ್ಸಿಯಮ್' ಹೆಸರಿನಲ್ಲಿ ಪ್ರಕಟಿಸಿದಳು. ಆಕೆಯ ಅಧ್ಯಯನದ ಚಿತ್ರಗಳನ್ನು ಲೇವಡಿ ಮಾಡಿದವರೂ ಇದ್ದರು. ಆದರೆ, ಜೀವವಿಕಾಸ ಸಿದ್ಧಾಂತದ ರೂವಾರಿ ಚಾರ್ಲ್ಸ್ ಡಾರ್ವಿನ್ ಮತ್ತು ಜೀವರಾಶಿ ನಾಮಕರಣ ಮತ್ತು ವರ್ಗೀಕರಣದ ಪಿತಾಮಹ ಕಾರ್ಲ್ ಲಿನೆಯಸ್‌ರವರು ಮೆರಿಯನ್ನಳ ಚಿತ್ರಗಳನ್ನು ತಮ್ಮ ಅಧ್ಯಯನಗಳಲ್ಲಿ ಆಕರವಾಗಿ ಬಳಸಿಕೊಂಡಿದ್ದಾರೆ.

ಕಲೆ, ಸೌಂದರ್ಯಕ್ಕೆ ಹಾಗೂ ಭಾವನೆಗಳಿಗೆ ಸಂಬಂಧಿಸಿದ್ದಾದರೆ, ವಿಜ್ಞಾನ ವಸ್ತುನಿಷ್ಠವಾದುದು. ಔಪಚಾರಿಕ ವೈಜ್ಞಾನಿಕ ಶಿಕ್ಷಣವಿಲ್ಲದ ಕಲಾವಿದೆಯಾಗಿದ್ದ ಆಕೆ ಆ ಸಮಯದ ಸಾಮಾಜಿಕ ತಿರಸ್ಕಾರವನ್ನು ಸಹಿಸಿ ತನ್ನ ಸ್ವಂತ ಆಸಕ್ತಿಯಿಂದ ಜೀವರಾಶಿಯ ಅಧ್ಯಯನದಲ್ಲಿ ತೊಡಗಿ, ತನ್ನ ಕಲಾನೈಪುಣ್ಯದಿಂದ ಎರಡನ್ನೂ ಯಶಸ್ವಿಯಾಗಿ ಸಮ್ಮಿಳಿತಗೊಳಿಸಿದವಳು. ಕೀಟಗಳ ಬಗೆಗಿದ್ದ ಆ ಕಾಲದ ಹಲವು ತಪ್ಪುಕಲ್ಪನೆಗಳಿಗೆ ಉತ್ತರ ನೀಡಿದಳು. ಇಂದು ಆಕೆಯ ಚಿತ್ರಗಳು ಜಗತ್ತಿನಾದ್ಯಂತ ಪ್ರತಿಷ್ಠಿತ ವಿಶ್ವವಿದ್ಯಾಲಯ ಹಾಗೂ ಮ್ಯೂಸಿಯಂಗಳಲ್ಲಿವೆ.

## ಪ್ರಕೃತಿಯಲ್ಲಿ ಆಸಕ್ತಿಯುಳ್ಳ ಕಲಾವಿದೆ

ಮರಿಯಾ ಸಿಬಿಲ್ಲಾ ಮೆರಿಯನ್ 1647ರ ಫೆಬ್ರುವರಿ 2ರಂದು ಜರ್ಮನಿಯ